ಅ) ಅಕ್ಟೋಬರ್ 1954ರಲ್ಲಿ.

ಆ) ಮೊತ್ತ 29 ಹುದ್ದೆಗಳು (ವರ್ಗವಾರು ಅಂಕಿ ಸಂಖ್ಯೆಗಳು ಈ ಕೆಳಗಿನಂತಿದೆ)

ಹುದ್ದೆಗಳ ಹೆಸರು	ಹುದ್ದೆಗಳ ಸಂಖ್ಯೆ
1) ಕಾರ್ಯದರ್ಶಿ	1
2) ಅಕೌಂಟೆಂಟ್	1
3) ಸೂಪರಿಂಟೆಂಡೆಂಟ್	1
4) ಗುಮಾಸ್ತರು-1ನೇ ದರ್ಜೆ	8
5) 2ನೇ ದರ್ಜೆ	3
6) ಶೀಘ್ರಲಿಪಿಗಾರರು	2
7) ಬೆರಳಚ್ಚುಗಾರರು	4
8) ಜವಾನರು	5
9) ಬಾಲಕರು	3
10) ಅಂಕಿ ಅಂಶಗಳ ಸಹಾಯಕ	1
ಒಟ್ಟು	29

ಇ) ಹಂಗಾಮಿ ನೌಕರರು ಇಲ್ಲ, ಆದರೆ 1989-90ರಲ್ಲಿ 5 ಹುದ್ದೆಗಳು, 1990-91ರಲ್ಲಿ 5ಹದ್ದೆಗಳು, ಫೆಬ್ರವರಿ 91ರಲ್ಲಿ 3 ಹುದ್ದೆಗಳು, ಕೇಂದ್ರ ಸಮಾಜ ಕಲ್ಯಾಣ ಮಂಡಳಿಯವರ ಅನುಮೋದನೆಯ ಆಧಾರದ ಮೇರೆಗೆ ನೇಮಕ ಮಾಡಲಾಗಿದ್ದು ಈ 13 ನೌಕರರನ್ನು ತದರ್ಥವಾಗಿ (89 ದಿನಗಳಿಗೆ ಮಾತ್ರ) ನೇಮಕ ಮಾಡಲಾಗಿದ್ದು, ಈ ನೌಕರರ ವೇತನವನ್ನು ಪೂರ್ಣವಾಗಿ ಕೇಂದ್ರ ಸಮಾಜ ಕಲ್ಯಾಣ ಮಂಡಳಿಯೇ ನೀಡುತ್ತೀದೆ. ಮೇಲ್ಕಂಡ 13 ತದರ್ಥ (ಅಡ್‌ಹಾಕ್) ನೌಕರರ ಪೈಕಿ 8 ಜನರನ್ನು ಕೆಲಸದಿಂದ ತೆಗೆಯಲಾಗಿದ್ದು, ಇನ್ನು ಅವಧಿ ಪೂರ್ಣಗೊಳ್ಳದಿದ್ದ ಕಾರಣ ಹಾಲಿ 5 ನೌಕರರು ಕೆಲಸ ಮಾಡುತ್ತಿದ್ದಾರೆ.

ಮಹಿಳಾ ಒಕ್ಕೂಟಗಳ ಸ್ಥಾಪನೆ ಬಗ್ಗೆ

141 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟು ಉತ್ತರಿಸುವರೆ?

ಅ) ರಾಜ್ಯಾದಾದ್ಯಂತ ಮಹಿಳಾ ಒಕ್ಕೂಟಗಳ ರಚನೆಯನ್ನು ಯಾವಾಗ ಸ್ಥಾಪನೆ ಮಾಡಲಾಯಿತು?

ಆ) ಇವುಗಳ ಮೂಲ ಉದ್ದೇಶವೇನು?

ಇ) ಈಗ ಈ ಮಹಿಳಾ ಒಕ್ಕೂಟಗಳನ್ನು ಪುನರ್‌ಚೇತನಗೊಳಿಸಲು ಸರ್ಕಾರ ಯಾವ ಕಾರ್ಯಕ್ರಮ ತೆಗೆದುಕೊಂಡಿವೆ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಮಂತ್ರಿಗಳು);

ಅ) 1975-76.

ಅ) ಮಹಿಳಾ ಮಂಡಳಿಗಳನ್ನು ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟಗಳಲ್ಲಿ ಕಾರ್ಯ ಚಟುವಟಿಕೆಗಳನ್ನು ಪುನಃಶ್ಚೇತನ ಹಾಗೂ ಬಲಪಡಿಸಲೋಸುಗ ಮಹಿಳಾ ಒಕ್ಕೂಟಗಳನ್ನು ರಚಿಸಲಾಯಿತು.

ಇ) ಸರ್ಕಾರವು ಮಹಿಳಾ ಮಂಡಳಿ ಹಾಗೂ ಮಹಿಳಾ ಒಕ್ಕೂಟಗಳನ್ನು ಚುರುಕುಗೊಳಿಸಲು ಸರ್ಕಾರದ ಕಾರ್ಯಕ್ರಮಗಳಾದ, ಸಾಮಾಜಿಕ ಪಿಡುಗು ನಿವಾರಣೆ, ಕುಟುಂಬ ಕಲ್ಯಾಣ, ಸಣ್ಣ ಉಳಿತಾಯ, ಕೈತೋಟ, ವಿಶೇಷ ಪೌಷ್ಠಿಕ ಆಹಾರ, ಶಿಶು ಹಾರೈಕೆ ಇನ್ನು ಮುಂತಾದ ಕಾರ್ಯಕ್ರಮಗಳನ್ನು ಮಹಿಳಾ ಒಕ್ಕೂಟಗಳ ಮುಖಾಂತರ ಜಾರಿಗೊಳಿಸಲಾಗುತ್ತಿದೆ.

ಸರ್ಕಾರಕ್ಕೆ ಅಬ್ಕಾರಿ ಇಲಾಖೆಯಿಂದ ಬಂದ ಆದಾಯದ ಬಗ್ಗೆ

856 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1-4-1990 ರಿಂದ 31-1-1991ರವರೆಗೆ ರಾಜ್ಯ ಸರ್ಕಾರಕ್ಕೆ ಅಬಕಾರಿ ಇಲಾಖೆಯ ಎಲ್ಲ ಬಾಬುಗಳಿಂದ ಬಂದ ಆದಾಯ ಎಷ್ಟು (ಜಿಲ್ಲಾ ಹಾಗೂ ತಾಲ್ಲೂಕುವಾರು ಮಾಹಿತಿ ಕೊಡುವುದು?

ಆ) 1990ನೇ ನವೆಂಬರ್ ತಿಂಗಳ ನಂತರ ಅಬ್ಕಾರಿ ಇಲಾಖೆಯಿಂದ ರಾಜ್ಯ ಸರ್ಕಾರಕ್ಕೆ ಬರತಕ್ಕ ಆಧಾಯ ಕಡಿಮೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಈ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮ ಏನು?

ಶ್ರೀ ಕೆ. ಶಿವಮೂರ್ತಿ (ಅಬಕಾರಿ ರಾಜ್ಯ ಸಚಿವರು);

ಅ) 351.32 ಕೋಟಿ ರೂ.ಗಳು. ಇಲಾಖೆಯಲ್ಲಿ ಜಿಲ್ಲೆಯನ್ನು ಒಂದು ಘಟಕವನ್ನಾಗಿ ಮಾಡಲಾಗಿರುವುದರಿಂದ ಜಿಲ್ಲಾವಾರು ಅಂಕಿಗಳು ಮಾತ್ರ ಲಭ್ಯವಿದೆ. (ಮಾಹಿತಿಯನ್ನು ಇದಕ್ಕೆ ಲಗತ್ತಿಸಿದೆ).

ಆ) ಇಲ್ಲ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.